<u>(ಪಿ ಡಬ್ಲೂ 9) ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 24-01-2026</u>
<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಬಿ .ಆರ್.ಎಮ್. ವಕೀಲರಿಂದ</u>

15. 2 ನೇ ಆರೊಪಿತ ತಹಸಿಲ್ದಾರ ಕಛಿರಿಯಲ್ಲಿ ಗ್ರಾಮ ಲೆಕ್ಕಿಗ ಎಂದು ಕೆಲಸ ಮಾಡುತ್ತಿದ್ದ ಎಂದರೆ ಸರಿ. 2 ನೇ ಆರೊಪಿಯ ಬಳಿ ದಾಳಿ ನಡೆಸಿದ ಸಮಯದಲ್ಲಿ ದೂರುದಾರನಿಗೆ ಸಂಬಂದಿಸಿದ ಕೆಲಸ ಬಾಕಿ ಇದ್ದ ಬಗ್ಗೆ ತನಿಖೆಯ ಅವಧಿಯಲ್ಲಿ ನಾನು ಯಾವುದೇ ದಾಖಲೆ ಕಲೆ ಹಾಕಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ದೂರುದಾರರಿಗೆ ಸಂಬಂದಿಸಿದ ಕಡತವು ಆರೊಪಿತನ ಕಛೆರಿಯಿಂದ ವರದಿಯೊಂದಿಗ ತಹಾಸಿಲ್ದಾರ ಕಛೆರಿ ನಂತರ ಉಪ ವಿಭಾಗಾಧಿಕಾರಿ ಕಛೆರಿಗೆ ರವಾನಿಸಲ್ಪಟ್ಟಿತ್ತು ಎಂದರೆ ಸರಿ. 2 ನೇ ಆರೊಪಿಗೆ ಸಂಬಂದಿಸಿದಂತೆ ದ್ವನಿ ವಿಶ್ಲೆಷಣಾ ವರದಿ ಎಫ್ ಎಸ್ ಎಲ್ ನಿಂದ ಪಡೆದಿಲ್ಲ ಎಂದರೆ ಸರಿ. ದೂರುದಾರ ಮತ್ತು 2 ನೇ ಆರೊಪಿತನ ದಾಖಲಿಸಿ ಕೂಂಡ ದ್ವನಿ ಸಂಭಾಷಣೆಯನ್ನು ಸಹ ಎಫ್ ಎಸ್ ಎಲ್‌ಗೆ ಕಳುಹಿಸಿಲ್ಲ ಎಂದರೆ ಸರಿ.

16. ದಿಃ 10-07-2019 ರಂದು ನಾನು ಉಪ ನಿಬಂಧಕರು 13 ಲೊಕಾಯಕ್ತ ಕಛೆರಿ ಬೆಂಗಳೂರವರ ಮುಂದೆ ಇಲಾಖಾ ತನಿಖೆಯಲ್ಲಿ ಈ ಪ್ರಕರಣದಲ್ಲಿ ಸಾಕ್ಷಿ ದಾರರಾಗಿ ಹೇಳಿಕೆ ಕೋಟ್ಟಿರುತ್ತೆನೆಂದರೆ ಸರಿ. ಸದರಿ ಸಂಭಾಷಣೆಯಲ್ಲಿ 2 ನೇ ಆರೋಪಿ ತನಗೆ ನೆರವಾಗಿ ಲಂಚದ ಹಣ ನೀಡಬೆಕೆಂದು ದೂರುದಾರರಿಂದ ಬೆಡಿಕೆ ಇಟ್ಟದ್ದು ಇಲ್ಲ ಎಂದರೆ ಸರಿ. 2 ನೇ ಆರೊಪಿ ಯ ವುದೆ ಲಂಚದ ಹಣದ ಬೇಡಿಕೆ ಇಡದೆ ಸ್ವಿಕರಿಸದ ಕಾರಣ ಮತ್ತು ಯಾವುದೇ ಕಡತ ದೂರುದಾನಿಗೆ ಸಂಬಂದಿಸಿದ ಬಾಕಿಯಿಲ್ಲದ ಕಾರಣ ಆತ ಯಾವುದೆ ಅಪರಾಧ ಎಸಗಿಲ್ಲವಾದರು ನಾನು ಸುಳ್ಳು ತನಿಖೆಯ ಮುಲಕ ಸೃಷ್ಟಿತ ದಾಖಲೆಗಳೊಂದಿಗ ತನಿಖೆ ನಡೆಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.